ನೀಡಲಾಗಿದೆ ದಿನಾಂಕ 27 1 2007ರವರೆಗೆ ಈ ಕೆಳಕಂಡ ಜಿಲ್ಲೆಗಳಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದೆ

1 ಹಾಸನ, 2, ರಾಯಚೂರು, 3 ದಾವಣಗೆರೆ, 4 ಬಿಜಾಪುರ, 5 ಬೀದರ್ 6 ಚಿಕ್ಕಮಗಳೂರು, 7 ಬೆಳಗಾಂ

378 (646) ಶ್ರೀ ಕೃಷ್ಣಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಪ್ರದೇಶದ ಜನರು ವರ್ಷಂಪ್ರತಿ ಎದುರಿಸುತ್ತಿರುವ ಕಡಲೆತದಿಂದ ಉಂಟಾಗುವ ಪರಿಣಾಮಗಳನ್ನು ಎದುರಿಸಲು ಸರ್ಕಾರ ಕೈಗೊಂಡ ಮುಂಜಾಗರೂಕತಾ ಕ್ರಮಗಳೇನು,

ಆ) ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ರೂಪಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವುಗಳೇನು,

ಇ) ವರ್ಷ ವರ್ಷವೂ ತಾತ್ಕಾಲಿಕ ಪರಿಹಾರವನ್ನು ಒದಗಿಸಲು ಬದಲು ಶಾಶ್ವತ ಪರಿಹಾರ ಒದಗಿಸಲು ಸರ್ಕಾರ ಕ್ರಮ ಜರುಗಿಸುವುದೇ,

ಈ) ಕೇಂದ್ರ ಸರ್ಕಾರದ ನೆರವಿನೊಂದಿಗೆ ಕರಾವಳಿ ಪ್ರದೇಶದಲ್ಲಿ ತಡೆಗೋಡೆ ನಿರ್ಮಾಣ ಮಾಡಲು ಯೋಜನೆಯನ್ನು ರೂಪಿಸಲಾಗಿದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) .

ಅ) ತೀವ್ರತರವಾದ ಸಮುದ್ರ ಕೊರತೆ ಸಂಭವಿಸಿದ ಪ್ರದೇಶಗಳಲ್ಲಿ ತಾತ್ಕಾಲಿಕ ಕಲ್ಲಿನ ತಡೆಗೋಡೆ ಅಥವಾ ಮರಳು ಚೀಲಗಳ ಬಂಡಿಂಗ್ ನಿರ್ಮಿಸಿ ತುರ್ತು ಸಂರಕ್ಷಣೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ

ಆ) Central Water & Power Research Station (C W P R S) Pune ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್ ಮೈಸೂರು ಸಂಸ್ಥೆಯವರು ಅಧ್ಯಯನ ಮಾಡಿ ನೀಡಿರುವ ತಾಂತ್ರಿಕ ವಿನ್ಯಾಸದಂತೆ ಈವರೆಗೆ ತೀವ್ರ ಸಮುದ್ರ ಕೊರತೆ ಸಂಭವಿಸಿದ ಪ್ರದೇಶಗಳಲ್ಲಿ ಸುಮಾರು 50 ಕಿ ಮೀ ಉದ್ದದ ಪ್ರದೇಶದಲ್ಲಿ ಅಂದಾಜು ವೆಚ್ಚ ರೂ 136 00 ಕೋಟಿ (ಪರಿಷ್ಕೃತ ಅಂದಾಜು ರೂ 292 00 ಕೋಟಿ) ಗಳಿಗೆ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆ" ಅಡಿಯಲ್ಲಿ ವಿನ್ಯಾಸಂತೆ ಕಲ್ಲಿನ ತಡೆಗೋಡೆ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಇದು ಕೇಂದ್ರ ಸರ್ಕಾರವು ತಯಾರಿಸಿರುವ National Coastal Protection Project (N C P P) Phase-I ರಲ್ಲಿ ಸೇರ್ಪಡೆಯಾಗಿರುತ್ತದೆ ತೀವ್ರ ಸಮುದ್ರ ಕೊರತೆ ಸಂಭವಿಸುತ್ತಿರುವ

ಉಳ್ಳಾಲ ಪ್ರದೇಶದಲ್ಲಿ "T" ಗ್ರಾಯನ್ಸ್ ನಿರ್ಮಿಸುವ ಅಥವಾ STABI PLEGE ತಂತ್ರಜ್ಞಾನ ಅಳವಡಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ

ಇ) –ಹೌದು–

ಮೇಲೆ ವಿವರಿಸಿರುವಂತೆ ಯೋಜನೆಗಳು ಸರ್ಕಾರದ ಮುಂದೆ ಪರಿಶೀಲನೆಯಲ್ಲಿದ್ದು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ

ಈ) –ಹೌದು–

ಕೇಂದ್ರ ಪುರಸ್ಕೃತ ಯೋಜನೆಯಡಿ ಕುಂದಾಪುರ ತಾಲ್ಲೂಕು ಪಡುವರಿಯಲ್ಲಿ ರೂ 575 00 ಲಕ್ಷ ಅಂದಾಜು ವೆಚ್ಚದಲ್ಲಿ 1170 ಮೀ ಉದ್ದಕ್ಕೆ ತಡೆಗೋಡೆ ನಿರ್ಮಿಸುವ ಕಾಮಗಾರಿಯ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಿದ್ದು ಶೀಘ್ರವಾಗಿ ಕಾಮಗಾರಿ ಪ್ರಾರಂಭಿಸಲಾಗುವುದು ರಾಜ್ಯದ ಕರಾವಳಿಯಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಸುಮಾರು 50 ಕಿ ಮೀ ಪ್ರದೇಶದಲ್ಲಿ 136 00 ಕೋಟಿ (ಪರಿಷ್ಕೃತ ಅಂದಾಜು ರೂ 292 00 ಕೋಟಿ) ಅಂದಾಜು ವೆಚ್ಚದಲ್ಲಿ ಕೇಂದ್ರ ಸರ್ಕಾರದ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯಡಿ" ತಡೆಗೋಡೆ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು ಇದು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ

379 (647) ಶ್ರೀ ಕೃಷ್ಣಾಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಂಚಾರ ಸುಧಾರಣೆಗಾಗಿ ಚಾಲನೆಗೊಂಡ ಬಿ–ಟ್ರಾಕ್ ಯೋಜನೆಗಳು ಯಾವುವು (ವಿವರ ಒದಗಿಸುವುದು),

ಆ) ಸದರಿ ಕಾರ್ಯಕ್ರಮದ ಪ್ರಗತಿಯೇನು

ಇ) ನಗರದ ವಿವಿಧ ಭಾಗಗಳಲ್ಲಿ ಉಂಟಾಗುತ್ತಿರುವ ಸಂಚಾರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ರೂಪಿಸಿದ ಯೋಜನೆಗಳು ಯಾವುವು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) .

ಅ) ಬೆಂಗಳೂರು ನಗರದ ಸಂಚಾರ ಸುಧಾರಣೆಗಾಗಿ ಚಾಳನೆಗೊಂಡ ಬಿ–ಟ್ರಾಕ್ ಯೋಜನೆಗಳು 2006ರಿಂದ ಆರಂಭಿಸಿ ಮುಂಬರುವ ವರ್ಷಗಳಲ್ಲಿ ಕೈಗೊಳ್ಳಲಾಗುವ ವಿವಿಧ ಯೋಜನೆಗಳು ಈ ಕೆಳಕಂಡಂತೆ ಇರುತ್ತದೆ